ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಮಂಗಳವಾರ, ದಿನಾಂಕ : 24 ನೇ ಮಾರ್ಚ್, 2020

ಮೆ:ಯಶಸ್ವಿನಿ ಅನಿಲ ಗೋದಾಮನ್ನು ಸ್ಥಳಾಂತರಿಸುವ ಬಗ್ಗೆ

ಶ್ರೀ ಶರಣಪ್ಪ ಮಟ್ಟೂರ(ಶಿಕ್ಷಕರ ಕ್ಷೇತ್ರ):-

1552 (1823) ಮಾನ್ಯ ಆಹಾರ ಮತ್ತು ನಾಗರಿಕರ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರಿನ ಪರಿಮಳನಗರದ (ವಾರ್ಡ್ ನಂ.43) 9ನೇ ಮುಖ್ಯರಸ್ತೆಯಲ್ಲಿರುವ ಮೆ:ಯಶಸ್ವಿನಿ ಗ್ಯಾಸ್ ಗೋದಾಮಿನಿಂದ ಸುತ್ತಮುತ್ತಲಿನ ನಾಗರಿಕರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಸದರಿ ಗ್ಯಾಸ್ ಗೋದಾಮನ್ನು ಸ್ಥಳಾಂತರಿಸುವ ಬಗ್ಗೆ ಸುತ್ತಮುತ್ತಲಿನ ನಾಗರಿಕರು ಸರ್ಕಾರಕ್ಕೆ ದೂರು ನೀಡಿದ್ದಾರೆಯೇ;

(ಇ) ಪಶ್ಚಿಮ ವಲಯದ ಉಪನಿರ್ದೇಶಕರು ದಿನಾಂಕ: 23/03/2017 ರಂದು ಗೋದಾಮನ್ನು ಕೂಡಲೇ ಬೇರೆ ಕಡೆ ವರ್ಗಾಯಿಸುವುದು ಸೂಕ್ತವೆಂದು ವರದಿ ನೀಡಿರುವುದು ನಿಜವೇ; ಯಾವ ದಿನಾಂಕದಂದು ವರದಿ ನೀಡಿದ್ದಾರೆ; ವರದಿಯ ಪ್ರತಿ ನೀಡುವುದು;

(ಈ) ಸದರಿ ಗೋದಾಮನ್ನು ತಕ್ಷಣವೇ ಸ್ಥಳಾಂತರಿಸಬೇಕೆಂದು ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ಸಂಬಂಧಪಟ್ಟ ತಹಶೀಲ್ದಾರ್ರಿಗೆ ಪತ್ರ ಬರೆದಿರುವುದು ನಿಜವೇ; ಇದ್ದಲ್ಲಿ, ಯಾವ ದಿನಾಂಕದಂದು ಪತ್ರ ಬರೆದಿದ್ದಾರೆ; (ಪತ್ರದ ಪ್ರತಿ ನೀಡುವುದು)

(ಉ) ಜನನಿಬಿಡ ಪ್ರದೇಶದಲ್ಲಿ ಗ್ಯಾಸ್ ಅವಘಡ ತಪ್ಪಿಸುವ ದಿಸೆಯಲ್ಲಿ ಗೋದಾಮು ಸ್ಥಳಾಂತರಿಸಲು ಈವರೆಗೂ ಕೈಗೊಂಡಿರುವ ಕ್ರಮಗಳೇನು; ಯಾವ ನಿಗದಿತ ದಿನಾಂಕದೊಳಗೆ ಸ್ಥಳಾಂತರಿಸಿ ನಾಗರಿಕರನ್ನು ಅವಘಡದಿಂದ ರಕ್ಷಿಸಲಾಗುವುದು?